### ವ್ಯತ್ಯಾಸ ಏನು?

ಮಹಿಳೆಯರು ತಮ್ಮ ಮಗನನ್ನು ಕೃಷ್ಣನನ್ನಾಗಿ ಮಾಡಿ ಖುಷಿ ಪಡುತ್ತಾರೆ. ಆದರೆ, ತಮ್ಮ ಗಂಡಂದಿರಲ್ಲಿ ಸ್ವಲ್ಪವಾದರೂ ಕೃಷ್ಣನ ಗುಣ ಕಂಡರೆ ಗಂಡನ ಮೂತಿಯನ್ನು ಹನುಮಂತನ ಮೂತಿಯನ್ನಾಗಿ ಮಾಡುತ್ತಾರೆ.

### ಸಮಾನತೆ

ಶಿಕ್ಷಕ: ಗುಂಡ ಸಮಾನತೆ ಎಲ್ಲಿದೆ?

ಗುಂಡ: ಬಾರ್ ಮತ್ತು ಸ್ಮಶಾನದಲ್ಲಿ.

ಶಿಕ್ಷಕ: ಅದು ಹೇಗೆ?

ಗುಂಡ: ಯಾವುದೇ ಭೇದಭಾವ ಇಲ್ಲದೇ ಬಾರ್‌ನಲ್ಲಿ ಎಲ್ಲರನ್ನೂ ಕುಡುಕರು ಎಂದು ಕರೆದರೆ, ಸ್ಮಶಾನದಲ್ಲಿ ಸತ್ತವರು ಎನ್ನುತ್ತಾರೆ.

### ಡೌಟು?

ಶಿಕ್ಷಕನೊಬ್ಬ 'ಮೊಬೈಲ್ ಬಗ್ಗೆ ಇವತ್ತು ಪಾಠ ಮಾಡಿ, ಅದರ ಬಗ್ಗೆ ಏನಾದರೂ ಡೌಟ್ ಇದೆಯಾ' ಎಂದು ವಿದ್ಯಾರ್ಥಿಗಳನ್ನು ಕೇಳಿದ. ಗುಂಪಿನಿಂದ ಎದ್ದು ನಿಂತ ವಿದ್ಯಾರ್ಥಿಯೊಬ್ಬ, 'ಸರ್ ಮೊಬೈಲ್‌ನಲ್ಲಿ ಡಿಲೀಟ್ ಆಗಿದ್ದೆಲ್ಲಾ ಎಲ್ಲಿಗೆ ಹೋಗುತ್ತದೆ' ಎಂದು ಕೇಳಿದ. ಪ್ರಶ್ನೆ ಕೇಳಿದ ಶಿಕ್ಷಕ ಉತ್ತರ ಗೊತ್ತಾಗದೆ ಕಕ್ಕಾಬಿಕ್ಕಿ!

ಶಿಕ್ಷಕಿ: ಬಸ್ಸಿನಲ್ಲಿ ಕುಳಿತ ಪ್ರಯಾಣಿಕರೆಲ್ಲರೂ ಬಸ್ಸಿನ ಹೊರಗೆ ನೋಡುತ್ತಿದ್ದರೆ ಕೆಲವರು ಕಂಡಕ್ಟರನ್ನು ಯಾಕೆ ನೋಡುತ್ತಿರುತ್ತಾರೆ?

ವಿದ್ಯಾರ್ಥಿ: ಅವರಿಗೆ ಕಂಡಕ್ಟರ್‌ನಿಂದ ಚಿಲ್ಲರೆ ಬರಬೇಕೇನೋ ಅದಕ್ಕೆ?



### ಆರೋಗ್ಯ ವಿಚಾರಿಸುವಿಕೆ!

ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದ ವ್ಯಕ್ತಿಯನ್ನು ನೋಡಲು ಮೊದಲು ಅಮೆರಿಕನ್ ವ್ಯಕ್ತಿ ಬಂದು, 'ಬೇಗ ಗುಣಮುಖನಾಗು ಡಿಯರ್' ಎಂದ. ನಂತರ ಬಂದ ಬ್ರಿಟನ್ ವ್ಯಕ್ತಿ, 'ನೀನು ಬೇಗ ಹುಷಾರಾಗಲೆಂದು ದೇವರಲ್ಲಿ ಪ್ರಾರ್ಥಿಸುವೆ' ಎಂದ. ಕಡೆಯದಾಗಿ ಬಂದ ಭಾರತದ ವ್ಯಕ್ತಿ, 'ಮೊನ್ನೆ ನಮ್ಮೂರಲ್ಲಿ ಒಬ್ಬನಿಗೆ ಇಂತಹದ್ದೇ ಕಾಯಿಲೆ ಬಂದಿತ್ತು. ಆ ಕಾಯಿಲೆ ಬಂದ ಕೆಲವೇ ದಿನಗಳಲ್ಲಿ ಅವನು ಸತ್ತು ಹೋದ' ಎಂದ!

### ಗುಂಡ ಕೊಟ್ಟ ಟಿಪ್ಸ್

ಹೊಸದಾಗಿ ಮದುವೆಯಾಗಿದ್ದ ಗುಂಡ ತನ್ನ ಹೆಂಡತಿಯನ್ನು ಹೋಟೆಲ್‌ಗೆ ಕರೆದುಕೊಂಡು ಹೋದ. ಹೊಸದಾಗಿ ಹಾಕಿದ್ದ ಟೇಬಲ್ ಮೇಲೆ ಇಬ್ಬರೂ ಕೂತರು. ಗುಂಡ ಪ್ರೀತಿಯಿಂದ ಹೀಗೆ ಹೇಳಿದ, 'ಲೇ ಹೆಂಡತಿ ಏನ್ ಬೇಕೋ ಅದನ್ನೆಲ್ಲ ಟೇಸ್ಟ್ ಮಾಡೇ'.

ಖುಷಿಯಿಂದ ಹೆಂಡತಿ ವೇಟರ್‌ನನ್ನು ಕರೆದ ಹೋಟೆಲ್‌ನಲ್ಲಿ ಇರೋ ಐಟಂ ಎಲ್ಲ ಒಂದೊಂದು ಪ್ಲೇಟ್ ಆರ್ಡರ್ ಮಾಡಿದಳು. ಅದೆಲ್ಲವನ್ನೂ ಟೇಸ್ಟ್ ಮಾಡಿ ತಟ್ಟೆಯಲ್ಲಿ ಹಾಗೇ ಸಾಕಷ್ಟು ಆಹಾರವನ್ನು ಉಳಿಸಿ ಕೈ ತೊಳೆಯಲು ಹೋದಳು. ಅದನ್ನು ಕಂಡ ಪತಿ ದಂಗಾದ. ಕೈತೊಳೆದುಕೊಂಡು ಬಂದ ಆಕೆಯ ಕೈಗೆ ವೇಟರ್ ಬಿಲ್ ಕೊಟ್ಟ. ಅದನ್ನು ಗುಂಡನಿಗೆ ಕೊಟ್ಟು ರೀ ಬಿಲ್ ಜೊತೆ ವೇಟರ್‌ಗೆ ಟಿಪ್ಸ್ ಕೊಡ್ರಿ ಅಂದಳು. ಗುಂಡ ವೇಟರ್‌ನನ್ನು ಕರೆದು, 'ಜೀವನದಲ್ಲಿ ಎಂದೂ ಹೆಂಡತಿಯನ್ನು ಹೋಟೆಲ್‌ಗೆ ಕರೆದೊಯ್ಯಬೇಡ. ಹೋದರೂ ಟೇಸ್ಟ್ ಮಾಡು ಎನ್ನಬೇಡ'.

(ಸಂಗ್ರಹ) ರಮಾನಂದ ಶರ್ಮಾ, ಬೆಂಗಳೂರು

ಓಂ ✝ ☪ ಸರ್ವೇಜನಃ ಸುಖಿನೋ ಭವಂತುಃ ಓಂ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.